**ದಿನಾಂಕಃ 08.07.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

1. ನಾನು ವಿದ್ಯಾಭ್ಯಾಸ ಪಡೆದಿರುವುದಿಲ್ಲ. ಸಹಿ ಮಾಡಲು ಕಲಿತಿರುತ್ತೇನೆ. ನಾನು ಪ್ರತಿವಾದಿಯರು ಈ ದಾವೆಯನ್ನು ಹೂಡಿರುತ್ತೇನೆ. ಸರ್ವೆ ನಂ. 62 ರಲ್ಲಿ 6 ಎಕರೆ 19 ಗುಂಟೆ ಇದ್ದು ಅದರಲ್ಲಿ 30 X 40 ಅಡಿ ವಿಸ್ತೀರ್ಣದ ಶೆಡ್ಡು ಇರುತ್ತದೆ. ಸದರಿ ಸ್ವತ್ತಿಗೆ ಈ ದಾವೆಯನ್ನು ಹೂಡಿರುತ್ತೇನೆ. ಸದರಿ ಸ್ವತ್ತಿನ ಪಹಣಿಯಲ್ಲಿ ಯಾರ ಹೆಸರು ಇರುತ್ತದೆಂದು ಗೊತ್ತಿರುವುದಿಲ್ಲ ಮುಂದುವರೆದು ಸರ್ಕಾರಿ ಜಮೀನು ಎಂದು ಹೇಳುತ್ತಾರೆ. ಸರ್ವೆ ನಂ. 62 ರಲ್ಲಿ ಇರುವ 6 ಎಕರೆ 19 ಗುಂಟೆ ಜಾಗದ ಪೂರ್ವದ ಕಡೆ ನನ್ನ ಶೆಡ್ಡು ಇರುತ್ತದೆ. ಸದರಿ ವಿಷಯವನ್ನು ದಾವೆಯಲ್ಲಿ ತಿಳಿಸಿರುತ್ತೇನೆ. ಆ ರೀತಿ ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ.

2. ನಾನು 40 ವರ್ಷದಿಂದ ಸ್ವಾ ಧೀನದಲ್ಲಿರುವ ಜಮಿನಿಗೆ ನನ್ನ ಹೆಸರಿನಲ್ಲಿ ಹಕ್ಕು ಪತ್ರ ನೀಡಲು ಕೋರಿ 2020 ರಲ್ಲಿಯೇ ತಹಶೀಲ್ದಾರವರಿಗೆ ಅರ್ಜಿಯನ್ನು ಸಲ್ಲಿಸಿರುತ್ತೇನೆ. ನಾನು ಸ್ವಾಧೀನದಲ್ಲಿರುತ್ತೇನೆಂದು ತೋರಿಸಲು ತಹಶೀಲ್ದಾರ್ ರವರು ಯಾವುದೇ ರೀತಿಯ ಅಳತೆ ಮಾಡಿರುವುದಿಲ್ಲ. ನಾನು ಸಲ್ಲಿಸಿದ ಅರ್ಜಿಯಲ್ಲಿ ನಾನು ಸರ್ವೆ ನಂ. 62 ರ ಯಾವ ಬಾಗದಲ್ಲಿ ಸ್ವಾ ಧೀನದಲ್ಲಿರುತ್ತೇನೆಂದು ತೋರಿಸಿರುತ್ತೇನೆ. ನಾನು ಸಲ್ಲಿಸಿದ ಎಲ್ಲಾ ಅರ್ಜಿ ಗಳಲ್ಲಿ 30 X 40 ಅಡಿ ವಿಸ್ತೀರ್ಣವನ್ನು ತೋರಿಸಿರುತ್ತೇನೆ.

3. ಜಿಲ್ಲಾಧಿಕಾರಯವರಿಗೂ ಮಂಜೂರಾತಿ ಕೋರಿ ಅರ್ಜಿಯನುನ ಸಲ್ಲಿಸಿರುತ್ತೇನೆ. ಅದರಲ್ಲಿಯು ಸಹ 30 X 40 ಅಡಿ ವಿಸ್ತೀರ್ಣವನ್ನು ತೋರಿಸಿರುತ್ತೇನೆ. ಸದರಿ ಅರ್ಜಿಯಲ್ಲಿ ನಾನು 40 X 50 ಎಂದು ವಿಸ್ತೀರ್ಣವನ್ನು ತೋರಿಸಿರುತ್ತೇನೆ ಎಂದರೆ ಸರಿಯಲ್ಲ. RTI ನಲ್ಲಿ ಯು ಸಹ ತಹಶೀಲ್ದಾರವರ್ ಬಳಿ ಅರ್ಜಿ ಸಲ್ಲಿಸಿರುತ್ತೇನೆ.

4. ಪ್ರತಿವಾದಿಯರು ನನ್ನ ಜಮೀನಿನ ಯಾವ ದಿಕ್ಕಿನಲ್ಲಿಯು ಸಹ ಇರುವುದಿಲ್ಲ. ಅವರು ನಮ್ಮ ಮನೆಯ ಮುಂದೆ ಇರುತ್ತಾರೆ ಎಂದರೆ ಸರಿಯಲ್ಲ. ಎ.ವಿ. ನಾರಾಯಣ್ ರವರು ನನಗೆ ಬರೆಯಲು ಬರುವುದಿಲ್ಲ ಎಂದು ಸಹಾಯ ಮಾಡಿರುತ್ತಾರೆ. ಎ.ವಿ. ನಾರಾಯಣ್ ರವರು ನನ್ನ ಜಮೀನಿನ ದಾಖಲೆಗಳನ್ನು ಕೋರಿ ಅರ್ಜಿಯನ್ನು ಸಲ್ಲಿಸಿದ್ದು ತಿಳಿದಿರುತ್ತೀದಿಯಾ ಎಂದರೆ ನಾನೇ ಸಲ್ಲಿಸಿರುತ್ತೇನೆ. ಅವರು ಸಂಬಂಧಿಕರಾಗಿರುವುದಿಲ್ಲ, ಹಾಗೆ ಸಹಾಯ ಮಾಡಿರುತ್ತಾರೆ ಹಾಗೂ ಅವರು ಆಲಹಳ್ಳಿ ಯವರಾಗಿರುತ್ತಾರೆ.

5. ಪೋಲೀಸರಿಗೆ 2020 ರಲ್ಲಿ ದೂರನ್ನು ಸಲ್ಲಿಸಿರುತ್ತೇನೆ. ನಿಪಿ 26 ರಲ್ಲಿ ಹೇಳಿರುವ ವಿಷಯಕ್ಕೆ ಸಂಬಂದಿಸಿದಂತೆ ಪೋಲಿಸರಿಗೆ ದೂರನ್ನು ಸಲ್ಲಿಸಿರುತ್ತೇನೆ. ದಾಖಲಿಸಿದ ದೂರಿನ ಪ್ರತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರಬಹುದು.

6. ಮೇಲಿನಜೋಗಹಳ್ಳಿ ಪಂಚಾಯತಿ ಯವರು ಬಂದು ಸ್ಥಳದಲ್ಲಿ ನಾನಿರುವ ಬಗ್ಗೆ ಅಳತೆ ಮಾಡಿರುತ್ತಾರೆ. ಆ ಅಳತೆಯ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಪ್ರತಿವಾದಿಯರ ಖಾತಾ ನಂಬರ್ ಅಥವಾ ಸರ್ವ ನಂಬರ್ ಗೊತ್ತಿರುವುದಿಲ್ಲ. ನಾವೆಲ್ಲರೂ

ಒಂದೇ ಊರಿನವರು. ನಮ್ಮಿಬ್ಬರ ಮನೆಗಳ ನಡುವೆ ½ ಕಿ.ಮೀ ಅಂತರ ವಿರುತ್ತದೆ. ನನ್ನ ಸ್ವತ್ತು ಅವರದ್ದು ಎಂ ದು ಬಂದು ಗಲಾಟೆ ಮಾಡಿರುತ್ತಾರೆ. ಆ ಕಾರಣಕ್ಕೆ ದಾವೆಯನ್ನು ಹೂಡಿರುತ್ತೇನೆ. ನನ್ನ ಮನೆ ಮುಂಬಾಗದಲ್ಲಿ ಪ್ರತಿವಾದಿಯರ ತಾಯಿಯ ಸ್ವತ್ತು ಇರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಯರ ತಾಯಿಯಾದ ಲಕ್ಷ್ಮೀದೇವಮ್ಮ ನವರು ನನ್ನ ವಿರುದ್ದ ಓ ಎಸ್ ನಂ. 348/20 ರಲ್ಲಿ ದಾವೆಯನ್ನು ಹೂಡಿರುತ್ತಾರೆ ಎಂದರೆ ಸರಿ. ಲಕ್ಷ್ಮೀದೇವಮ್ಮ ನವರ ಮನೆ ಎಲ್ಲಿರುತ್ತದೆ ಎಂದು ಗೊತ್ತಿಲ್ಲ. ನನ್ನ ಮನೆ ಮುಂದೆ ಸುಮಾರು 25 ಅಡಿ ರಸ್ತೆ ಇರುತ್ತದೆ ಹಾಗೂ ಅಕ್ಕ ಪಕ್ಕದಲ್ಲಿ ಮನೆಗಳಿರುತ್ತವೆ. ಲಕ್ಷ್ಮೀದೇವಮ್ಮ ರವರಿಗೆ ನನ್ನ ಮನೆಯ ಮುಂಬಾಗದಲ್ಲಿರುವ ಜಾಗವನ್ನು 1972 ರಲ್ಲಿ ಅವರ ಹೆಸರಿಗೆ ಮಂಜೂರಾತಿ ಯಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಯವರ ಗಂಡನ ಹೆಸರು ಗೊತ್ತಿಲ್ಲ. 2020 ರಲ್ಲಿ ಸದರಿಯವರ ಹೆಸರಿಗೆ ಖಾತೆ ಸಹ ಆಗಿರುತ್ತದೆ ಹಾಗೂ ಅದೇ ರೀತಿಯಲ್ಲಿ ಅವರು ಸ್ವಾ ಧೀನದಲ್ಲಿರುತ್ತಾರೆ ಹಾಗೂ ಪ್ರತಿವಾದಿಯರು ನನ್ನ ಸ್ವಾಧೀನಕ್ಕೆ ಯಾವತ್ತು ತೊಂದರೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನೇ ಅವರ ಸ್ವಾ ಧೀನಕ್ಕೆ ತೊಂದರೆ ಕೊಟ್ಟು ಈ ಸುಳ್ಳು ದಾವೆಯನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

7. ನನ್ನ ಅರ್ಜಿಯ ಆಧಾರದ ಮೇಲೆ ಮೇಲಿನಜೋಗಹಳ್ಳಿಯ ಪಂಚಾಯತಿ ಯವರು ಅವರಿಗೆ ಹಕ್ಕು ಪತ್ರ ಕೊಡಲು ಬರುವುದಿಲ್ಲ. ತಹಶೀಲ್ದಾರವರಿಗೆ ಮನವಿ ಸಲ್ಲಿಸಿ ಎಂದು ತಿಳಿಸಿರುತ್ತಾರೆ. ನಾನು ನ್ಯಾಯಾಲಯಕ್ಕೆ ಸಲ್ಲಿಸಿದ ವಿದ್ಯುತ್ ಪಾವತಿ ರಶೀದಿಗಳು ಯಾವ ಮನೆಗೆ ಸೇರಿದ್ದಾಗಿರುತ್ತದೆ ಎಂದು ತೋರಿಸಲು ಸದರಿ ಮನೆಯ ಫಾರ್ಮ ನಂ.9 ಅನ್ನು ಕೊಟ್ಟಿರುತ್ತೇನೆ.

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.**

**(ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,**
**ದೊಡ್ಡಬಳ್ಳಾಪುರ.**